[ Govt. of Karnataka C.R.P. 67]

| Deposition Sheets (RP.No.57) Form No.4 (Civil) |
|---|

**IN THE COURT OF <u>CIVIL JUDGE & J.M.F.C., KARKALA.</u>**

**Criminal Case No. 333/2023**

ಪಿ.ಡಬ್ಲ್ಯು : 6 ಸಿ.ಡಬ್ಲ್ಯು : 8

ಸಾಕ್ಷಿದಾರನ ಹೆಸರು : ಸತೀಶ್

ತಂದೆಯ ಹೆಸರು : ಸಾಧು

ಪ್ರಾಯ : 47 ವರ್ಷ

ಉದ್ಯೋಗ : ಮುಖ್ಯ ಪೇದೆ

ವಾಸ : ಅಜೆಕಾರು

ದಿನಾಂಕ 10.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ನಾನು 2021 ಡಿಸೆಂಬರ್ ನಿಂದ 2023 ಡಿಸೆಂಬರ್ ರವರೆಗೆ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಪ್ರಸ್ತುತ ಅಜೆಕಾರು ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ27.11.2022 ರಂದು ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಅಕ್ರ 170/2022 ಕಲಂ 454, 457, 380 ಐಪಿಸಿ ರಲ್ಲಿ ಆರೋಪಿ ಪತ್ತೆಗಾಗಿ ಮೇಲಾಧಿಕಾರಿಯವರು ನೇಮಿಸಿದಂತೆ ಸಿಬ್ಬಂದಿಯವರಾದ ಚಾಸಾ-9 ರಿಂದ 11 ರವರನ್ನು ಜೊತೆಯಲ್ಲಿ ಕರೆದುಕೊಂಡು ಆರೋಪಿಯ ಪತ್ತೆಗಾಗಿ ಠಾಣಾ ಸರಹದ್ದಿನಲ್ಲಿ ಸಂಚರಿಸಿ ಎಂ ಜಿ ಎಂ ವಠಾರದಲ್ಲಿ ಇರುವಾಗ ಇಂದ್ರಾಳಿ ಕಡೆಯಿಂದ ಉಡುಪಿ ಕಡೆಗೆ ಬಿಳಿ ಬಣ್ಣ ಹೊಂಡಾ ಆ್ಯಕ್ಟಿವಾದಲ್ಲಿ ಹಳೆ ಆರೋಪಿಯಾಗಿದ್ದ ಹರ್ಷಿತ್ ಅವಿನಾಶ್ ಡೊದ್ರೆ ಬರುತ್ತಿರುವುದನ್ನು ಗಮನಿಸಿದ ನಾವು ಆತನನ್ನು ನಿಲ್ಲಿಸುವಂತೆ ಸೂಚನೆ ಕೊಟ್ಟರು ನಿಲ್ಲಿಸದೆ ಮುಂದಕ್ಕೆ ಮೋಟಾರು ಸೈಕಲ್ ನ್ನು ಚಲಾಯಿಸಿಕೊಂಡು ಹೋಗಿರುತ್ತಾನೆ. ಆತನನ್ನು ಹಿಂಬಾಳಿಸಿಕೊಂಡು ಹೋದ ನಾವು ಕಡಿಯಾಳಿ ಜಂಕ್ಷನ್ ನಲ್ಲಿ ಅಡ್ಡಗಟ್ಟಿ ಹೆಸರು

ವಿಳಾಸ ಕೇಳಿದಾಗ ತಡವರಿಸಿರುತ್ತಾನೆ. ಕೂಲಂಕುಶವಾಗಿ ವಿಚಾರಿಸಿದಾಗ ಆತನ ಹೆಸರು ಹರ್ಷಿತ್ ಅವಿನಾಶ್ ಡೊಡ್ರೆ ಎಂದು ಒಪ್ಪಿಕೊಂಡಿರುತ್ತಾನೆ. ಆತನ ಬಳಿ ಇದ್ದ ಮೋಟಾರು ಸೈಕಲ್ ನ ಬಗ್ಗೆ ವಿಚಾರಿಸಲಾಗಿ ಯಾವುದೇ ದಾಖಲೆಗಳು ಇಲ್ಲದೆ ಮೋಟಾರು ಸೈಕಲ್ ನ್ನು ತ್ರಾಸಿ ಪೆಟ್ರೋಲ್ ಬಂಕ್ ನ ಬಳಿ ಕಳ್ಳತನ ಮಾಡಿಕೊಂಡು ಬಂದಿರುವುದಾಗಿ ಒಪ್ಪಿ ಕೊಂಡಿರುತ್ತಾನೆ. ಉಡುಪಿ ನಗರ ಠಾಣೆ ಅಕ್ರ 170/22 ರಲ್ಲಿ ಬಗ್ಗೆ ವಿಚಾರಿಸಲಾಗಿ ತಾನು ಬಲಾಯಿಪಾದೆಯಲ್ಲಿರುವ ಮಂಜುಶ್ರಿ ಹರ್ಬಲ್ ಅಂಗಡಿಯ ಬೀಗ ಮುರಿದು ಹಣ ಕಳುವು ಮಾಡಿರುವುದಾಗಿ ಒಪ್ಪಿಕೊಂಡ ಮೇರೆಗೆ ಆತನನ್ನು ಬೆಳಿಗ್ಗೆ 9.30 ಗಂಟೆಗೆ ವಶಕ್ಕೆ ಪಡೆದು 10.00 ಗಂಟೆಗೆ ಚಾಸಾ-7 ರವರ ಮುಂದೆ ಹಾಜರುಪಡಿಸಿ ನಂತರ ಮಹಜರು ಸಮಯ ಹಾಜರಿದ್ದು ಮಹಜರಿಗೆ ಸಹಿ ಮಾಡಿರುತ್ತೇನೆ.

ಸಾಕ್ಷಿಯು ಆರೋಪಿಯ ದಸ್ತಗಿರಿ ಮತ್ತು ಸೊತ್ತು ಸ್ವಾಧೀನತಾ ಮಹಜರಿನ ಯಥಾ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು</u> : ಆರೋಪಿ ಪರ : ಶ್ರೀ ಎಂ ಐ ಕೆ ವಕೀಲರಿಂದ ::

ನಾನು ಆರೋಪಿ ಯ ಪತ್ತೆಗಾಗಿ ಯಾವುದೇ ವಿಶೇಷ ತಂಡದೊಂದಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ನಮ್ಮ ತಂಡದೊಂದಿಗೆ ವಶಕ್ಕೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಸ್ತಗಿರಿ ಮಹಜರು ಸೊತ್ತು ಸ್ವಾಧೀನತ ಮಹಜರು ಸಮಯ ಹಾಜರಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಶಪಡಿಸಿಕೊಂಡಿದ್ದೇನೆ ಎನ್ನುವ ಸೊತ್ತುಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ :: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ